ಈ ಯೋಜನೆಯು ಇಂಡಿಯಾ ಫೌಂಡೇಷನ್ ಆಫ್ ಆರ್ಟ್ಸ್‌ರವರ ಸಹಕಾರದಿಂದ 560 ಕಾರ್ಯಕ್ರಮದ ಅಡಿ ಸಾಧ್ಯವಾಗಿದೆ

# ಬೆವರು

ಜನವರಿ 2020
ಬೆಂಗಳೂರು

5 ರುಪಾಯಿ

**ಪ್ರೀತಿ, ಘನತೆ, ಹೋರಾಟ**

**ಮನೆಕೆಲಸದವರ, ಪೌರಕಾರ್ಮಿಕರ, ಉಡುಪು ಕೆಲಸಗಾರರ ಮತ್ತು ಬೀಡಿ ಕಾರ್ಮಿಕರ ಸಹಯೋಗದಿಂದ**

VOL. 4

## ಗುರುತಿನ ಭಯ

2019ರ ಅಕ್ಟೋಬರ್ 26 ರಂದು, 59 ಬಾಂಗ್ಲಾದೇಶಿ ವಲಸೆ ಕಾರ್ಮಿಕರನ್ನು ಅವರಿದ್ದ ಮನೆಗಳಿಂದ ಬಂಧಿಸಿ, ಟ್ರೇನ್‌ನಲ್ಲಿ ಸಾಗಿಸಿ, ಭಾರತ-ಬಾಂಗ್ಲಾದ ಗಡಿಯಲ್ಲಿ ಮಧ್ಯರಾತ್ರಿಯಂದು ಬಿಟ್ಟು ಬರಲಾಯಿತು. ಈ ವಲಸೆ ಕಾರ್ಮಿಕರು ದಶಕಗಳಿಂದ ನಗರದಲ್ಲಿ ಕಸ ಆಯುವ ಮತ್ತು ಮನೆಕೆಲಸದ ಉದ್ಯೋಗ ಮಾಡಿಕೊಂಡಿದ್ದರು. ಅವರಲ್ಲಿ ಕೆಲವರನ್ನು ಬಾಂಗ್ಲಾದೇಶದ ತಮ್ಮ ಮನೆಗೆ ಮರಳಿಹೋಗುವಂತೆ ಮಾಡಲಾಯಿತು. ಆದರೆ ಇನ್ನಿತರರು ಏನಾದರೋ, ಅವರ ಸುದ್ದಿಯಿಲ್ಲ. ಇನ್ನೂ ಬಂಧನಕ್ಕೊಳಗಾಗದಿರುವ., ಅಥವಾ ಇನ್ನೂ ಬಾಂಗ್ಲಾದೇಶಕ್ಕೆ ಹೋಗದೇ ಇರುವವರೊಂದಿಗೆ ನಾವು ಮಾತನಾಡಿದೆವು. ಗುರುತಿಗೆ, ದುಡಿಮೆಗೆ, ಧರ್ಮಕ್ಕೆ ಮತ್ತು ನಗರಕ್ಕೆ ಸಂಬಂಧಿಸಿದಂತೆ ಅವರ ಅನುಭವಗಳು, ಖಚಿತ ಪ್ರಶ್ನೆಗಳನ್ನು ಎತ್ತುತ್ತವೆ.

"ನಾನು ಈ ನಗರಕ್ಕೆ ಬಂದಾಗ ನನಗೆ 16 ವರ್ಷ. ಮೆಜೆಸ್ಟಿಕ್‌ನ ರೈಲ್ವೇ ಸ್ಟೇಶನ್‌ನಲ್ಲಿ ಇಳಿದುಕೊಂಡಿದ್ದೆ. ನಾನು ನನ್ನ ಗಂಡ ಒಂದು ಆಟೋ ಹಿಡಿದು ಈ ಸ್ಲಂಗೆ ಬಂದೆವು. ನನ್ನ ಗಂಡ ನಗರದಲ್ಲಿ ಕಸದ ವಾಹನ ಓಡಿಸುತ್ತಾರೆ. ನಾವು ಬೆಂಗಳೂರನ್ನು ನಮ್ಮ ಮನೆ ಎಂದು ತಿಳಿದಿದ್ದೇವೆ. ಕೆಜಿಗೆ ರೂ.8 ರಂತೆ ಮರವನ್ನು ತಂದು, ಕೆಜಿಗೆ ರೂ.10 ರಂತೆ ಟಿನ್ ತಂದು ನಾನು ಈ ಮನೆಯನ್ನು ನನ್ನ ಕೈಯಾರೆ ಕಟ್ಟಿದ್ದೇನೆ. ಈಗ ನೋಡಿದರೆ ಅವರು ಇದು ನಿನ್ನ ಮನೆಯಲ್ಲ ಎನ್ನುತ್ತಿದ್ದಾರೆ, ನನ್ನದೆಂದುಕೊಂಡಿರುವ ಎಲ್ಲವನ್ನೂ ಬಿಟ್ಟು ಹೊರಡುವಂತೆ ಹೇಳುತ್ತಿದ್ದಾರೆ"

ರೇಶ್ಮಾ ಬಾಂಗ್ಲಾದೇಶದವರು. ಕಳೆದ 10 ವರ್ಷದಿಂದ ಸುತ್ತಮುತ್ತಲಿನ ಎತ್ತರದ ಅಪಾರ್ಟ್-ಮೆಂಟ್‌ಗಳಲ್ಲಿ ಅವರು ಮನೆಕೆಲಸ ಮಾಡಿಕೊಂಡು ವಲಸೆಕಾರ್ಮಿಕರ ಕಾಲೋನಿಯಲ್ಲಿ ವಾಸಿಸುತ್ತಿದ್ದಾರೆ.



"ನೀವು ಹೊರಗಿನವರು, ನಿಮ್ಮನ್ನು ಇಲ್ಲಿಂದ ಕಳಿಸಿಬಿಡುತ್ತಾರೆ, ಇನ್ನೆರಡು ದಿನಗಳಲ್ಲಿ ನೀವು ಮನೆ ಬಿಡಬೇಕಾಗುತ್ತದೆ ಎಂದೆಲ್ಲ ಕಳೆದ ಎಂಟು ವರ್ಷಗಳಿಂದ ನಮ್ಮನ್ನು ಬೆದರಿಸಲಾಗುತ್ತಿದೆ. ಮೊದಲೆಲ್ಲ ಪೊಲೀಸರು ಮಾತ್ರ ಈ ರೀತಿ ಹೇಳುತ್ತಿದ್ದರು, ಈಗ ಸರ್ಕಾರ ಕೂಡಾ ಹೇಳುತ್ತಿದೆ. ಅದಕ್ಕೇ ನಮಗೆ ಭಯವಾಗಿದೆ."

ರೇಶ್ಮಾ, ಅವರ ಗಂಡ, ಅಪಾರ್ಟ್‌ಮೆಂಟ್ ಮತ್ತು ಕಚೇರಿಗಳಿಂದ ತ್ಯಾಜ್ಯವನ್ನು ಸಂಗ್ರಹಿಸಿ, ಅದನ್ನು ಮರುಬಳಕೆಗಾಗಿ ವಿಂಗಡಿಸುತ್ತಾರೆ. "ನಾನು ಈ ನಗರ ಬಿಟ್ಟು ಹೊರಟು ಹೋದರೆ ಈ ಕೆಲಸ ಮಾಡುವವರು ಯಾರು?" ಎಂದು ಅವರು ಕೇಳುತ್ತಾರೆ. "ಮೋದಿ ಬಂದು ಇದನ್ನೆಲ್ಲ ಸ್ವಚ್ಛಗೊಳಿಸುತ್ತಾರೆಯೇ?" ಎಂದು ರೇಶ್ಮಾ ವ್ಯಂಗ್ಯವಾಡುತ್ತಾರೆ.

7 ವರ್ಷಗಳ ಹಿಂದೆ ಭಾರತ-ಬಾಂಗ್ಲಾ ಗಡಿ ದಾಟಲು ರೇಶ್ಮಾ ರೂ.7000ಗಳನ್ನು ಪಾವತಿಸಿದ್ದರು. ಆದರೆ ಈ ಬಾರಿ ಅವರಿಗೆ ತಿಳಿದುಬಂದದ್ದೇನೆಂದರೆ, ರಾತ್ರಿ ಹೊತ್ತು ಗಡಿ ದಾಟಲೂ ರೂ.15000-20000ಗಳನ್ನು ನೀಡಬೇಕೆಂದು. ವಲಸೆ ಕಾರ್ಮಿಕರ ಕಾಲೋನಿಯಲ್ಲಿ ಒಂದು ಅಸಹಜ ಮೌನ ಆವರಿಸಿದೆ. ಬಹುತೇಕ ಮನೆಗಳ ಬಾಗಿಲುಗಳಲ್ಲಿ ಬೀಗಗಳು ನೇತಾಡುತ್ತಿವೆ. ಒಂದು ಕಾಲದಲ್ಲಿ ಜಾಗಕ್ಕಾಗಿ ಕಿತ್ತಾಡುತ್ತಾ, ನೀರಿಗಾಗಿ ಮತ್ತು ವೈಯಕ್ತಿಕ ಕಾರಣಗಳಿಗಾಗಿ ಸ್ಫೋಟಗೊಳ್ಳುತ್ತಾ ಅತ್ಯಂತ ಕ್ರಿಯಾಶೀಲವಾಗಿ ಗಿಜಿಗುಡುತ್ತಿದ್ದ ಆ ಗಲ್ಲಿಗಳು ಈಗ ಅನಾಥವಾಗಿವೆ. ಅಲ್ಲಿ ಈಗ ಜಗಳವಾಡಲು ಹೆಚ್ಚು ಜನಗಳು ಉಳಿದಿಲ್ಲ. ಈ ಮುಂಚೆ ಅಲ್ಲಿ 2000ದಿಂದ 2500 ಬಾಂಗ್ಲಾದೇಶೀ ಕುಟುಂಬಗಳಿದ್ದು ಈಗ ಕೇವಲ 3 ಉಳಿದುಕೊಂಡಿವೆ ಎಂದು ಹೇಳಲಾಗುತ್ತಿದೆ.

ಆ ವಸತಿ ಕಾಲೋನಿಯನ್ನು ಬಿಡಲು ಮೀನಾ ಇನ್ನೂ ತಯಾರಾಗಿಲ್ಲ. ಪರಿಸ್ಥಿತಿ ಸರಿಯಾಗಬಹುದೆಂದು ಕಾಯುತ್ತಾ, ನಾನು ಮರಳಿ ಹೋಗಬೇಕಾಗಿಲ್ಲವೆಂದು ಭರವಸೆ ಇರಿಸಿಕೊಂಡಿದ್ದಾರೆ. "ನಮ್ಮ ರಕ್ಷಣೆಗೆಂದು

...2ನೇ ಪುಟದಲ್ಲಿ ಮುಂದುವರೆದಿದೆ

## ಸಂಪಾದಕೀಯ

ಜನವರಿ 18ರಂದು ಮುನ್ನಿ ಬೇಗಂ, 4 ಗಂಟೆಯ ನಸುಕಿನಲ್ಲಿಯೇ ಎದ್ದು, ಮನೆಯವರಿಗೆ ಅಡುಗೆ ಮಾಡತೊಡಗಿದಳು. ಮನೆ ಮತ್ತು ಮಕ್ಕಳನ್ನು ಸಂಭಾಳಿಸಿ, ಅವಳು ಮತ್ತು ಅವಳಂತೆಯೇ ನೂರಾರು ಕುಟುಂಬಗಳು ನೆಲೆಗೊಂಡಿದ್ದ ವಸತಿಸ್ಥಳದ ಸುತ್ತಮುತ್ತಲಿರುವ ಗೇಟೆಡ್ ಕಾಲೋನಿಯಲ್ಲಿ ಅವಳು ಮನೆಕೆಲಸಕ್ಕೆ ಹೊರಡಬೇಕಿತ್ತು. ಆ ವಸತಿ ಪ್ರದೇಶದಲ್ಲಿ ಉತ್ತರ ಕರ್ನಾಟಕ, ಅಸ್ಸಾಂ, ಜಾರ್ಖಂಡ್ ಮತ್ತು ಬಂಗಾಳದಿಂದ ವಲಸೆ ಬಂದಿರುವ ಕಾರ್ಮಿಕರು ಟಾರ್ಪಾಲಿನ್ ಅನ್ನು ಹೊದಿಸಿದ ಟಿನ್‌ಶೀಟ್ ಗೋಡೆಗಳ ಗುಡಿಸಲನ್ನೇ ಮನೆಗಳು ಎಂದು ಕರೆದುಕೊಳ್ಳುತ್ತಾರೆ. ಅವರೆಲ್ಲ ನಗರದ ಸುತ್ತಮುತ್ತ, ಕಟ್ಟಡ ಕಾರ್ಮಿಕರಾಗಿ, ಸೆಕ್ಯೂರಿಟಿ ಗಾರ್ಡ್‌ಗಳಾಗಿ, ಮನೆಕೆಲಸದವರಾಗಿ ಅಥವಾ ತ್ಯಾಜ್ಯ ಮರುವಿಂಗಡಣೆ, ಮತ್ತಿತರ ಕೆಲಸಗಳನ್ನು ಮಾಡುತ್ತಾರೆ.

ಮುನ್ನಿ ಮತ್ತು ಇತರರು ಅಂದು ಕೆಲಸ ಮುಗಿಸಿ ಬಂದಾಗ ಅವರ ಮನೆಗಳು (ಅವಳ ಮನೆ ಕೆಲವು ವರ್ಷ ಹಳೆಯದು) ಗುರುತಿಲ್ಲದಂತೆ ನೆಲಸಮವಾಗಿತ್ತು, ಚದುರಿಹೋಗಿದ್ದ ಇಟ್ಟಿಗೆಗಳು, ಇತರ ಅವಶೇಷಗಳು ಸುತ್ತಲೂ ಕಾಣುತ್ತಿದ್ದವು. ಪೊಲೀಸರು ಮತ್ತು ಬಿಬಿಎಂಪಿ ಅಧಿಕಾರಿಗಳು ತಂದಿದ್ದ ಜೆಸಿಬಿ ಹತ್ತಿರದಲ್ಲಿಯೇ ಹೊಂಚುಹಾಕುತ್ತಿತ್ತು. ಅದನ್ನು ನೋಡುತ್ತಿದ್ದಂತೆಯೇ ಅವಳು ಮತ್ತು ಇತರ ಕೆಲವು ಮಹಿಳೆಯರು, ಓಡಿ, ತಮ್ಮ ಮನೆಯ ಅಳಿದುಳಿದ ಸಾಮಾನುಗಳನ್ನು ರಕ್ಷಿಸಿಕೊಳ್ಳಲು ಅದರ ದಾರಿಗೆ ಅಡ್ಡಗಟ್ಟಿ ನಿಂತರು. "ಸುಮಾರು 4 ಲಕ್ಷದಷ್ಟು ಮೌಲ್ಯದ ಆಸ್ತಿ ಮತ್ತು ವ್ಯವಹಾರಗಳು ನಷ್ಟವಾಗಿದೆ" ಎಂದು ಅವರು ಹಂಚಿಕೊಂಡರು. "ನಾವು ವಿದ್ಯುತ್ ಸಂಪರ್ಕ, ನೀರಿನ ಸಂಪರ್ಕ ಕಳೆದುಕೊಂಡಿದ್ದೇವೆ, ನಮ್ಮ ಮಕ್ಕಳು ಈ ಅಸ್ತವ್ಯಸ್ತತೆಯಲ್ಲಿ ಮಲಗಬೇಕಿದೆ" "ನಾವು ಪ್ರಾಣಿಗಳಲ್ಲ, ಮನುಷ್ಯರು, ನಮ್ಮನ್ನು ಹೀಗೆ ನಡೆಸಿಕೊಳ್ಳಲು ಅವರಿಗೆಷ್ಟು ಧೈರ್ಯ?"

ಇದು ನಮ್ಮ ದೇಶ, ಇಲ್ಲಿರಲು ಅವರು ಬಿಡದಿದ್ದರೆ ನಾವು ಎಲ್ಲಿಗೆ ಹೋಗಬೇಕು?" ಇದು, 4 ವರ್ಷದಿಂದ ಇಲ್ಲಿ ವಾಸಿಸುತ್ತಿರುವ ಅಸ್ಸಾಂನ ಒಬ್ಬ ಯುವಕನ ಪ್ರಶ್ನೆ.

ಈವಸತಿಪ್ರದೇಶದಲ್ಲಿ ವಾಸಿಸುತ್ತಿರುವವರು "ಬಾಂಗ್ಲಾದೇಶದ ಅಕ್ರಮ ವಲಸಿಗರು" ಎಂಬ ಸುದ್ದಿಯೊಂದಿಗೆ ಒಂದು ಲೈವ್ ವಿಡಿಯೋ ಹರಿದಾಡಿದ ಮೇಲೆ, ಈ ವಸತಿಪ್ರದೇಶವನ್ನು ನೆಲಸಮ ಮಾಡಬೇಕೆಂದು ಆದೇಶ ಮಾಡಲಾಗಿತ್ತು. ಅಲ್ಲಿನ ನಿವಾಸಿಗಳು ಪ್ಯಾನ್‌ಕಾರ್ಡ್, ಆಧಾರ್‌ಕಾರ್ಡ್, ಬಾಡಿಗೆ ಕರಾರುಪತ್ರ ಹೀಗೆ ತಮ್ಮ ಹತ್ತಿರ ಇದ್ದ ಎಲ್ಲ ದಾಖಲೆಗಳನ್ನೂ ಎಳೆದೆಳೆದು ತೋರಿಸುತ್ತಿದ್ದರು, ಅದರಲ್ಲಿ ಆ ಕುಟುಂಬವು ಅಸ್ಸಾಂನಿಂದ ಬಂದ್ದದ್ದು ಎಂದು ಅವರ ಹೆಸರುಗಳಿಂದ ಸ್ಪಷ್ಟವಾಗಿ ತಿಳಿಯುತ್ತಿತ್ತು. ಇನ್ನೂ ಎಷ್ಟು ಕಾಗದಪತ್ರ ತೋರಿಸಬೇಕು? ರಾಷ್ಟ್ರದ ಹಿತಾಸಕ್ತಿಯ ಹೆಸರಿನಲ್ಲಿ, ಸರ್ಕಾರವು ತನ್ನ ಪ್ರಜೆಗಳ ವಿರುದ್ಧವೇ ತಿರುಗಿಬಿದ್ದಿದೆ. ಮುನ್ಸೂಚನೆಯಿಲ್ಲದೆ ಮನೆಗಳನ್ನು ನೆಲಸಮ ಮಾಡುವುದು ಭಯಹುಟ್ಟಿಸುವ ಕ್ರಮವಾಗಿದ್ದು, ಇದು ಆಡಳಿತ ನಡೆಸುವ ಕ್ರಮವಲ್ಲ. ಕಾನೂನಿನ ನೆರವಿಲ್ಲದೆ, ಅದರಲ್ಲೂ ನಿವಾಸಿಗಳು ಯಾವ ರೀತಿಯ ಅತಿಕ್ರಮಣವನ್ನೂ ಮಾಡದಿದ್ದಾಗ ಅವರ ಮೇಲೆ ಬಲಪ್ರಯೋಗಿಸುವಂತಿಲ್ಲ ಮತ್ತು ಅವರ ಖಾಸಗೀ ಸ್ವತ್ತನ್ನು ಪ್ರವೇಶಿಸುವಂತಿಲ್ಲ.

ಆ ಭೂಮಿಯ ಮಾಲೀಕರೊಂದಿಗೆ ಅವರೆಲ್ಲರೂ ಬಾಡಿಗೆ ಒಪ್ಪಂದಪತ್ರವನ್ನು ಸಹಿ ಮಾಡಿದ್ದಾರೆ. ಈಗ ಅವರ ಮನೆಗಳು ನೆಲಸಮವಾಗಿದ್ದರಿಂದ ಅವರಿಗಾದ ನಷ್ಟವು ಬೆಲೆಕಟ್ಟಲಾಗದ್ದು. "ಈ ಅವಶೇಷಗಳ ನಡುವೆ ನಮ್ಮ ಪೌರತ್ವವನ್ನು ಸಾಬೀತು ಪಡಿಸುವ ಎಲ್ಲ ದಾಖಲೆಗಳನ್ನೂ ಕಳೆದುಕೊಂಡಿದ್ದೇವೆ. ಈಗ ನಾವು ಈ ದೇಶದ ಪ್ರಜೆಗಳೇ ಎಂದರೆ ಯಾರು ನಂಬುತ್ತಾರೆ?"

ರಾಷ್ಟ್ರೀಯತೆಯನ್ನು ಲೆಕ್ಕಿಸದೆ, ಈ ನಗರವನ್ನು ಕಟ್ಟುವ, ಶುಚಿ ಮಾಡುವ ಮತ್ತು ಇತರ ಸೇವೆ ಒದಗಿಸುವ ಜನಸಮುದಾಯವನ್ನು ತೆರವು ಗೊಳಿಸುವ ಕ್ರಮವು, ಈ ಸರ್ಕಾರಕ್ಕೆ ಬಡವರು ಮತ್ತು ಶೋಷಿತರನ್ನು ಕಂಡರೆ ಇರುವ ನಿರ್ಲಕ್ಷ್ಯ ಧೋರಣೆಯನ್ನು ತೋರಿಸುತ್ತದೆ. ಇಲ್ಲಿನ ನಿವಾಸಿಗಳು ತಮ್ಮ 'ರಕ್ಷಣೆ'ಗಾಗಿ ನಿಯಮಿತವಾಗಿ ಪೊಲೀಸರಿಗೆ ಲಂಚ ನೀಡಬೇಕಾಗಿತ್ತು. ಈಗ ಅದೇ ಪೊಲೀಸರು ಜೆಸಿಬಿಯೊಂದಿಗೆ ಬಂದು ಅವರ ಮನೆಗಳನ್ನು ನೆಲಸಮಗೊಳಿಸಿದ್ದಾರೆ. "ಬಡತನವನ್ನು ಅಳಿಸುತ್ತೇನೆಂದು ಮೋದಿ ಹೇಳಿದ್ದರು, ಅವರು ತಮ್ಮ ಉದ್ದೇಶದಲ್ಲಿ ಯಶಸ್ಸುಗಳಿಸಿರಬಹುದು, ಏಕೆಂದರೆ ಬಡವರೆಲ್ಲ ಈಗ ಸಾಯುತ್ತಿದ್ದಾರೆ" ಎಂದು ಅಲ್ಲಿನ ಒಬ್ಬ ಯುವಕ ಹೇಳಿದರು.

ಜನವರಿ 18 ರಂದು ನಡೆದ ಘಟನೆಯು, ಗುರುತು, ಪೌರತ್ವ ಮತ್ತು ರಾಷ್ಟ್ರೀಯತೆಗೆ ಸಂಬಂಧಿಸಿದಂತೆ ಇಡೀ ದೇಶಾದ್ಯಂತ ಏನು ನಡೆಯಬಹುದು ಎಂದು ಊಹೆ ಮಾಡಲಾಗಿದೆಯೋ, ಅದರ ಒಂದು ಸಣ್ಣ ತದ್ರೂಪು. "ನಾವು ಇಲ್ಲಿಂದ ಹೋಗಬೇಕೆಂದು ಅವರು ಬಯಸಿದರೆ, ಪುನ: ನಮಗೆ NRC ನೋಂದಣಿ ಮಾಡಿಸಿಕೊಳ್ಳುವ ತೊಂದರೆಯೇಕೆ ಕೊಡುತ್ತಿದ್ದಾರೆ?" ಎಂದು ಅಸ್ಸಾಂನ ವ್ಯಕ್ತಿಯೊಬ್ಬರು ಕೇಳಿದರು. ಈ ರೀತಿಯ ಕಿರುಕುಳಗಳು, ಜನರ ಮಧ್ಯೆ ಹೊಸ ರೀತಿಯ ದ್ವೇಷ ಮತ್ತು ಒಡಕಿಗೆ ಖಂಡಿತ ಜನ್ಮಕೊಡುತ್ತದೆ. ಈಗಾಗಲೇ ಇದು "ಬಾಂಗ್ಲಾದೇಶದವರ ವಿರುದ್ಧದ" ಕಾರ್ಯಾಚರಣೆ ಎಂಬುದಾಗಿ ನೋಡಬಹುದು. ನಿರಾಶ್ರಿತರ ಪರ ಕಾಳಜಿಯನ್ನು ಮಾಡುವುದಾದರೆ, ಅದಕ್ಕೊಂದು ಅಧಿಕೃತ ಪ್ರಕ್ರಿಯೆಯಿರಬೇಕು. ಆದರೆ ಈ ರೀತಿ ಮನಸೋಇಚ್ಛೆ ಮತ್ತು ಉನ್ಮಾದದಿಂದ ಮನೆಗಳನ್ನು ನಾಶಗೊಳಿಸಿರುವುದನ್ನು ನೋಡಿದರೆ, ಸರ್ಕಾರದ ಹೊಣೆಗಾರಿಕೆಯ ಕೊರತೆ ಎದ್ದುಕಾಣುತ್ತದೆ, ಮತ್ತು ಇದು ಪೌರ ಮತ್ತು ರಾಷ್ಟ್ರ ಎಂಬುದರ ಬಗ್ಗೆ ಸರ್ಕಾರವು ಹೊಸ ಕಲ್ಪನೆಯನ್ನು ಕಟ್ಟುತ್ತಿರುವುದರ ಎಚ್ಚರಿಕೆಯ ಕುರುಹಾಗಿದೆ.

ಈ ಲೇಖನ ಬರೆಯುವ ಸಮಯದಲ್ಲಿ ಆಕ್ಟಿವಿಸ್ಟ್‌ಗಳು ಮುಂದೆ ನಡೆಯಬಹುದಾದ ಕಟ್ಟಡನೆಲಸಮದ ವಿರುದ್ಧ ತಡೆಯಾಜ್ಞೆ ತರಲು ನ್ಯಾಯಾಲಯದಲ್ಲಿ ಹೋರಾಡುತ್ತಿದ್ದಾರೆ. ನಿವಾಸಿಗಳು ಅಲ್ಲಿನ ತಮ್ಮ ವಾಸದ ಹಕ್ಕನ್ನು ಪ್ರತಿಪಾದಿಸುವುದನ್ನು ಮುಂದುವರೆಸಿದ್ದಾರೆ. "ನಾವು ಹತ್ತು ವರ್ಷಗಳಿಂದಲೂ ಇಲ್ಲಿಯೇ ಇದ್ದೇವೆ, ಇದು ನಮ್ಮ ಮನೆ, ಮತ್ತು ನಮ್ಮ ನಗರವು ಕೂಡಾ".

*ಮಾಧ್ಯಮಗಳ ವರದಿ ಹಾಗೂ ಕಿರುಚಿತ್ರತಯಾರಕರು ಮತ್ತು ಆಕ್ಟಿವಿಸ್ಟ್‌ಗಳು ಮಾಡಿದ ಕಟ್ಟಡ ನೆಲಸಮ ವಿಡಿಯೋ ಕವರೇಜ್‌ಅನ್ನು ಆಧರಿಸಿದೆ.

ದಯವಿಟ್ಟು ಕಾರ್ಮಿಕರ ಬಗೆಗಿನ ನಿಮ್ಮ ಲೇಖನಗಳನ್ನು, ಕವಿತೆಗಳನ್ನು, ಹಾಡುಗಳನ್ನು, ವಿಚಾರಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಿ. ನಿಮ್ಮ ಪ್ರತಿಕ್ರಿಯೆ ಮತ್ತು ಸಲಹೆಗಳನ್ನು ನಮಗೆ ತಿಳಿಸಿರಿ. ಮಾಹಿತಿಗಾಗಿ
bevarupaseena@gmail.com ಗೆ ಬರೆಯಿರಿ ಅಥವಾ 6366646052ಗೆ ಕರೆಮಾಡಿ.

ಮರಾ ಒಂದು ಪ್ರಚಾರ ಮತ್ತು ಕಲಾ ಸಮೂಹವಾಗಿದ್ದು, 2008ರಿಂದ ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸಮಾಜದ ಅಂಚಿನಲ್ಲಿರುವವರ ಧ್ವನಿಗೆ ಪ್ರಾಮುಖ್ಯತೆ ನೀಡಿ, ಭಾಷೆ ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯದತ್ತ ಕೆಲಸ ಮಾಡುತ್ತಿದೆ. ಅಭಿವೃದ್ಧಿಯಾಗುತ್ತಿರುವ ನಗರದ ಕಲ್ಪನೆಗೆ ಸವಾಲೊಡ್ಡಿ, ಬಹಿಷ್ಕಾರದ, ಹೋರಾಟದ ಆಖ್ಯಾನದ ಬಹುರೂಪಗಳನ್ನು ನಾವು ಪ್ರತಿನಿಧಿಸುತ್ತೇವೆ.

ಇಂಗ್ಲಿಷ್ ಲೇಖನಗಳು: ಅಂಗಾರಿಕ ಗುಹ, ಅನುಷಿ ಅಗರ್‌ವಾಲ್, ಏಕ್ತಾ ಎಮ್, ನಿಖಿಲಾ ಬಿ.

ಕನ್ನಡಕ್ಕೆ ಅನುವಾದ: ಪ್ರತಿಭಾ. ಆರ್, ಮಹಿಮಾ ಗೌಡ, ಬಸ್ವಚಾರ್

ಹಿಂದಿಗೆ ಅನುವಾದ: ಅನುಷಿ ಅಗರ್‌ವಾಲ್

ವಿನ್ಯಾಸ ಮತ್ತು ವಿವರಣೆ: ತಾರಾ ಥಾಮಸ್

...1ನೇ ಪುಟದಿಂದ ಮುಂದುವರೆದಿದೆ

# ಗುರುತಿನ ಭಯ

ವರ್ಷಾನುಗಟ್ಟಲೆಯಿಂದ ಪೊಲೀಸರು ನಮ್ಮಿಂದ ಹಣ ತೆಗೆದುಕೊಂಡಿದ್ದಾರೆ. ಈಗೇಕೆ ನಾವು ಹೆದರಿ ಓಡಿಹೋಗಬೇಕು?" ಆದರೆ ಈಗ, ಮನೆ ಖಾಲಿ ಮಾಡಿಸ ಬೇಕೆಂದು ಇವರಿಗೆ ಮನೆಗಳನ್ನು ಬಾಡಿಗೆಗೆ ಕೊಟ್ಟಿರುವ ಸ್ಥಳೀಯ ಕನ್ನಡಿಗರ ಮೇಲೆ ಪೊಲೀಸರೇ ಒತ್ತಡ ಹೇರುತ್ತಿದ್ದಾರೆ. ಪರಿಣಾಮವಾಗಿ ಮೀನಾ ಅವರ ನೆರೆಯವರು ತಮ್ಮ ವಸ್ತುಗಳನ್ನು ಅಗ್ಗದ ಬೆಲೆಗೆ ಮಾರಿ ತರಾತುರಿಯಿಂದ ಮನೆ ಖಾಲಿ ಮಾಡಿದರು.

ಬಂಧನಕ್ಕೊಳಗಾದವರಿಗೆ ಪೊಲೀಸರು ಕಿರುಕುಳ ನೀಡುತ್ತಿದ್ದಾರೆ, ಗಡಿಯಲ್ಲಿ ಅವರನ್ನು ಬಿಟ್ಟುಬರಲಾಗುತ್ತಿದೆ, ಅವರನ್ನು ಕಾರಾಗೃಹದಲ್ಲಿರಿಸಲಾಗುತ್ತಿದೆ, ತಂದೆತಾಯಿ ಮತ್ತು ಮಕ್ಕಳನ್ನು ಬೇರ್ಪಡಿಸಲಾಗುತ್ತಿದೆ ಎಂಬಂತಹ ಹಲವಾರು ರೀತಿಯ ಸುದ್ದಿಗಳು ವಾಟ್ಸ್‌ಆಪ್ ಮೂಲಕ ಎಲ್ಲರಿಗೂ ತಲುಪುತ್ತಿವೆ. ಪರಿಣಾಮವಾಗಿ ಜನರು ಭಯಗೊಂಡು ಅವರಾಗಿಯೇ ಬಾಂಗ್ಲಾದೇಶದ ತಮ್ಮ ಹಳ್ಳಿಗಳಿಗೆ ಮರಳುತ್ತಿದ್ದಾರೆ. ಆದರೆ ಗಡಿ ದಾಟಲು ಯತ್ನಿಸಿದವರನ್ನು ಭಾರತ ಸರ್ಕಾರವು ಬಂಧಿಸುತ್ತಿದೆ ಎಂಬ ಗಾಳಿಸುದ್ದಿಯೂ ಹರಡಿದೆ. ಹೀಗಾಗಿ "ಅಲ್ಲಿಗೆ ಹೋಗಲೂ ಬಿಡುತ್ತಿಲ್ಲ, ಇಲ್ಲಿರಲೂ ಬಿಡುತ್ತಿಲ್ಲ" ಎಂಬ ಇಬ್ಬಂದಿ ಪರಿಸ್ಥಿತಿಯಲ್ಲಿ ಬಾಂಗ್ಲಾದೇಶೀ ವಲಸಿಗರು ಇದ್ದಾರೆ.

"NRC ಅಂದರೆ ಏನು? ನನಗೆ ಗೊತ್ತಿಲ್ಲ", "ಈಗ 15-20 ದಿನದಿಂದೀಚೆಗೆ ಅದರ ಬಗ್ಗೆ ಕೇಳಿದೆ", "ಈಗ ಅವರು ನನ್ನ ಅಜ್ಜಅಜ್ಜಿಯರ ದಾಖಲೆಗಳನ್ನು ಕೇಳುತ್ತಿದ್ದಾರೆ". ಹೀಗೇ ಕಾರ್ಮಿಕರಲ್ಲಿ ಹಲವಾರು ಪ್ರಶ್ನೆಗಳಿವೆ. "ಸೆರೆಮನೆಗಳನ್ನು ಈಗಾಗಲೇ ಕಟ್ಟಿಸಿದ್ದಾರೆಯೇ ಇಲ್ಲವೇ? ಅದು ಹೇಗೆ ಕೆಲಸ ಮಾಡುತ್ತದೆ? ಅಲ್ಲಿಂದ ಜನರು ಎಲ್ಲಿಗೆ ಹೋಗುತ್ತಾರೆ? ಎಲ್ಲರಲ್ಲೂ ಒಂದು ರೀತಿ ಆತಂಕ ಮನೆಮಾಡಿದೆ. "ನಾವೇ ಏಕೆ? ಈಗ ಏಕೆ? ನಾವು ಇಲ್ಲಿ ಎಷ್ಟೋ ವರ್ಷದಿಂದ ವಾಸಿಸುತ್ತಿದ್ದೇವೆ. ಇಲ್ಲಿ ದುಡಿಯುತ್ತಿದ್ದೇವೆ; ಈ ನಗರದ ಬೀದಿ ಮತ್ತು ಮನೆಗಳನ್ನು ಸ್ವಚ್ಛಗೊಳಿಸುತ್ತಿದ್ದೇವೆ; ಇಲ್ಲಿ ಹಬ್ಬಗಳನ್ನು ಆಚರಿಸುತ್ತಿದ್ದೇವೆ, ಸ್ಕೂಲ್ ಫೀಸ್, ನೀರಿನ ಶುಲ್ಕ, ಮನೆಬಾಡಿಗೆಗಳನ್ನು ಕಟ್ಟುತ್ತಿದ್ದೇವೆ. ನಾವು ಯಾರಿಂದಲೂ ಏನನ್ನೂ ಅಪಹರಿಸುತ್ತಿಲ್ಲ, ಕಷ್ಟ ಪಟ್ಟು ನಮ್ಮ ಹಣ ನಾವು ಸಂಪಾದಿಸುತ್ತಿದ್ದೇವೆ, ನಮ್ಮ ಕೆಲಸದಿಂದಲೇ ನಗರವು ಸರಾಗವಾಗಿ ನಡೆಯುತ್ತಿದೆ. ಮತ್ತೇಕೆ ನಮ್ಮನ್ನು ನಮ್ಮ ಮನೆಗಳಿಂದ ಎಳೆದುಹಾಕಲಾಗುತ್ತಿದೆ?"

ಕೆಲವರು ಪರಿಸ್ಥಿತಿ ಸರಿಹೋದಮೇಲೆ ಬೆಂಗಳೂರಿನ ತಮ್ಮ ಮನೆಗಳಿಗೆ ಕೆಲಸಗಳಿಗೆ ಮರಳುವ ಭರವಸೆಯೊಂದಿಗೆ ತಮ್ಮ ಹಳ್ಳಿಗಳಿಗೆ ಮರಳಿದ್ದಾರೆ. "ನಮ್ಮ ಮನೆಗಳು ಇಲ್ಲಿವೆ, ನಾವು ಇನ್ನೆಲ್ಲಿ ಹೋಗಬೇಕು? ನಮ್ಮ ಹಳ್ಳಿಗಳಲ್ಲಿ ಸಂಪಾದನೆಯ ದಾರಿ ಇಲ್ಲ, ನಾವು ನಮ್ಮ ಬದುಕನ್ನು ಇಲ್ಲಿ ಕಟ್ಟಿಕೊಂಡಿದ್ದೇವೆ. ನಮಗಾಗಿ ಅಲ್ಲಿ ಏನೂ ಇಲ್ಲ, ನಾವು ಇಲ್ಲಿಗೇ ಬರಬೇಕು"

ಬೆಂಗಳೂರಿನ ಬಹುತೇಕ ಮನೆಕೆಲಸದ ಕಾರ್ಮಿಕರು ಈ ನಗರದವರಲ್ಲ. ಅವರು ರಾಯಚೂರು ಮತ್ತು ಕಲಬುರ್ಗಿಯಂತಹ ಊರುಗಳಿಂದ ವಲಸೆ ಬಂದವರು. NRC ಎಂಬ ಪದವನ್ನೇ ಅವರು ಕೇಳಿಲ್ಲ. ಈ ನಗರವನ್ನು ಬಿಡಬೇಕೆಂದು ಯಾರಾದರೂ ಕೇಳಿದ ಬಗ್ಗೆಯಾಗಲೀ, ವಲಸಿಗರ ಕಾಲೋನಿಯ ಜನರು ಭಯದಿಂದ ಬಿಟ್ಟುಹೋಗುತ್ತಿರುವ ಬಗ್ಗೆಯಾಗಲೀ ಅವರಿಗೆ ತಿಳಿದಿಲ್ಲ. ಎಲ್ಲರಿಗೂ ಈ NRC ಬಗ್ಗೆ ತಿಳಿದಿಲ್ಲದಿದ್ದರೂ, ಅದು ಹಲವರ ಬದುಕನ್ನು ಅಸ್ತವ್ಯಸ್ತಗೊಳಿಸಿದೆ. ಪರಿಸ್ಥಿತಿ ಹೀಗಿರುವಾಗ ಸರ್ಕಾರವು ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ಜನರಿಗೆ ತಿಳಿಸಿಕೊಡುವುದು ಯಾರ ಜವಾಬ್ದಾರಿ?

ರೇಶ್ಮಾ ಕಾಯುತ್ತಿದ್ದಾರೆ. ಪರಿಸ್ಥಿತಿ ಸುಧಾರಿಸುತ್ತದೆ, ಮತ್ತು ತಾನು ಇಲ್ಲಿಂದ ಹೋಗಬೇಕಾಗಿಲ್ಲವೆಂದು ಅವಳು ಭರವಸೆಯಿಂದ ಎದುರುನೋಡುತ್ತಿದ್ದಾರೆ. ತಾನಿಲ್ಲದಾಗ ಪೊಲೀಸರು ತನ್ನ ಮಕ್ಕಳನ್ನು ಎತ್ತಿಕೊಂಡು ಹೋಗುತ್ತಾರೆಂಬ ಭಯದಿಂದ ತಾನು ಮಾಡುತ್ತಿದ್ದ ಮನೆಕೆಲಸವನ್ನು ಈಗಾಗಲೇ ಬಿಟ್ಟಿದ್ದಾರೆ. ಅದೇ ಸಮಯದಲ್ಲಿ ಅಪಾರ್ಟ್‌ಮೆಂಟ್‌ನ ಜನರು ತಮಗೇನೂ ತೊಂದರೆಯಾಗದಿರಲಿ ಎಂದು ತಮ್ಮಲ್ಲಿ ಕೆಲಸ ಮಾಡುತ್ತಿದ್ದ ಬಾಂಗ್ಲಾದೇಶೀ ಕೆಲಸದವರನ್ನು ಕೆಲಸ ಬಿಡಿ ಎಂದು ಹೇಳುತ್ತಿದ್ದಾರೆ. ಕೆಲಸಕ್ಕೆ ಬರುವ ಮೊದಲು ಪೊಲೀಸ್ ಪರಿಶೀಲನೆ ಮುಗಿಸಿಕೊಂಡು ಬರಬೇಕೆಂದು ಕೇಳುತ್ತಿದ್ದಾರೆ. ಎಲ್ಲರ ಹತ್ತಿರವೂ ಆಧಾರ್ ಅಥವಾ ಪ್ಯಾನ್ ಕಾರ್ಡ್‌ನಂತಹ ಗುರುತುಚೀಟಿ ಇದೆ. ಕೆಲವರ ಹತ್ತಿರ ಚುನಾವಣಾ ಗುರುತು ಚೀಟಿಯೂ ಇದೆ, ಆದರೂ ಅವರನ್ನು ಯಾರೂ ನಂಬುತ್ತಿಲ್ಲ. ಏಕೆಂದರೆ ನಾಗರೀಕರಾಗಿರಲಿ, ಇಲ್ಲದಿರಲಿ, ಗುರುತಿಗಾಗಿ ಎಲ್ಲರೂ ಆಧಾರ್ ಮಾಡಿಸಿಕೊಳ್ಳಬೇಕೆಂದು ಸರ್ಕಾರ ಹೇಳಿರುವುದರಿಂದ ಅದನ್ನು ಅಧಿಕೃತ ಎಂದು ನಂಬುತ್ತಿಲ್ಲ. "ಅವರು ನಮ್ಮ ಮನೆಗಳಿಗೆ ಬರುತ್ತಾರೆ, ಆಧಾರ್ ಕಾರ್ಡ್ ಮಾಡಿಸಿಕೊಳ್ಳಬೇಕೆಂದು ಬಲವಂತ ಮಾಡುತ್ತಾರೆ, ಏಕೆಂದರೆ ಹೊರಗಿನವರಿಗೆ ಇಲ್ಲಿ ಕೆಲಸ ಸಿಗಲು ಆಗ ಮಾತ್ರ ಸಾಧ್ಯ. ಹೀಗೆ ಅವರೇ ಆಧಾರ್ ಗುರುತು ಚೀಟಿ ಮಾಡಿಸಿಕೊಟ್ಟು, ಅವರೇ ಈಗ ಅದರ ಮಾನ್ಯತೆಯನ್ನು ಪ್ರಶ್ನಿಸುತ್ತಿದ್ದಾರೆ."

ಬಾಂಗ್ಲಾದೇಶೀ ವಲಸೆ ಕಾರ್ಮಿಕರು ತಮ್ಮ ಕಾಲೋನಿಯನ್ನು ತೊರೆಯಲು ನಿರ್ಧರಿಸುವುದರಿಂದ, ಈಗ ಆ ಏರಿಯಾದಲ್ಲಿ ಹೆಚ್ಚು ಮನೆಕೆಲಸದವರು ಉಳಿದಿಲ್ಲ ಮತ್ತು ಕಸವನ್ನು ವಿಂಗಡಿಸುತ್ತಿದ್ದ ಕಾರ್ಮಿಕರು ಕಾಣಿಸುತ್ತಿಲ್ಲ. ಒಂದು ತಿಂಗಳಿಂದೀಚೆಗೆ ಸುಮಾರು 59 ಮಂದಿ ಬಾಂಗ್ಲಾದೇಶೀ ವಲಸೆ ಕಾರ್ಮಿಕರನ್ನು ಬಂಧಿಸಲಾಗಿದೆ, ಇದರ ಪರಿಣಾಮವಾಗಿ ಉಳಿದವರು ಭಯದಿಂದ ನಗರವನ್ನು ಬಿಟ್ಟು ಹೋಗುತ್ತಿದ್ದಾರೆ. ಹತ್ತಿರದ ಅಪಾರ್ಟ್‌ಮೆಂಟ್‌ನ ನಿವಾಸಿಗಳು ಹತಾಶೆಗೊಂಡು ತಮ್ಮ ಮನೆಕೆಲಸ ಮಾಡಲು ಯಾರಾದರೂ ಸಿಗುತ್ತಾರೆಯೇ ಎಂದು ಜನರನ್ನು ಹುಡುಕಿಕೊಂಡು ಕಾಲೋನಿಗೆ ಬರುತ್ತಿದ್ದಾರೆ, ಆದರೆ ಅಲ್ಲಿ ಯಾರೂ ಕಾಣಿಸುತ್ತಿಲ್ಲ. ಪೌರತ್ವ ಮತ್ತು ಗುರುತನ್ನು ಪುನಸ್ಥಾಪಿಸುವ ಉದ್ದೇಶದಿಂದ ಬರುತ್ತಿರುವNRC ಮತ್ತು CAA ಗಳಿಂದ ಮುಂದಿನ ಕೆಲವು ತಿಂಗಳುಗಳಲ್ಲಿ ಏನೇನು ಆಗುತ್ತದೆಯೋ ಹೇಳಲು ಕಷ್ಟ. ಇದರ ಜೊತೆಗೇ ಮೊಟ್ಟಮೊದಲು ಕನಸು ಕಾಣಲು ಸಾಧ್ಯವಾದ ಮತ್ತು ಸ್ವಾವಲಂಬಿಗಳನ್ನಾಗಿಸಿದ ಈ ನಗರದ ತಮ್ಮ ಬದುಕಿಗೆ ಒಡ್ಡಲಾಗುತ್ತಿರುವ ಬೆದರಿಕೆಯನ್ನು ಅರ್ಥೈಸಿಕೊಳ್ಳಲೂ ಕಾರ್ಮಿಕರು ಕಷ್ಟಪಡುತ್ತಿದ್ದಾರೆ.

"ನಾನು ಈ ಮನೆಯನ್ನು ಕೈಯಾರೆ ಕಟ್ಟಿದ್ದೇನೆ, ಕಷ್ಟಪಟ್ಟು ದುಡಿದ ದುಡ್ಡಿನಲ್ಲಿ ಟಿವಿ ತಂದಿದ್ದೇನೆ. ಒಂದು ವೇಳೆ ನಾನೇನಾದರೂ ಇದನ್ನೆಲ್ಲ ಬಿಟ್ಟುಹೋಗಬೇಕೆಂದರೆ ಎಲ್ಲವನ್ನೂ ಸುಟ್ಟುಹಾಕಿಬಿಡುತ್ತೇನೆ, ಎಲ್ಲವನ್ನೂ ಒಡೆದುಹಾಕಿಬಿಡುತ್ತೇನೆ, ಏಕೆಂದರೆ ಅಯ್ಯೋ ಎಲ್ಲವನ್ನೂ ಅಲ್ಲೇ ಬಿಟ್ಟುಬಂದೆನಲ್ಲ ಎಂಬ ಪಶ್ಚಾತ್ತಾಪವಾದರೂ ನನ್ನಲ್ಲಿ ಇರುವುದಿಲ್ಲ. ನಾನೇ ನನ್ನ ಕೈಯಾರೆ ಎಲ್ಲವನ್ನೂ ನಾಶ ಮಾಡಿ ಹೋಗುತ್ತೇನೆ"

2020ರ ಜನವರಿ 18 ರಂದು ಪೊಲೀಸ್ ಮತ್ತು ಬಿಬಿಎಂಪಿ ವಲಸೆಕಾರ್ಮಿಕರ ನೆಲೆಗಳ ಮೇಲೆ ದಾಳಿ ನಡೆಸಿ ಅವರ ಮನೆಗಳನ್ನು ಕೆಡವಿದರು. ಈ ವಸತಿನೆಲೆಗಳು ಅಕ್ರಮ ಮತ್ತು ಕಾನೂನು ಬಾಹಿರ ಮತ್ತು ಇಲ್ಲಿ ಕೆಲವು ಅಕ್ರಮ ಬಾಂಗ್ಲಾದೇಶೀ ವಲಸಿಗರು ನೆಲೆಸಿದ್ದಾರೆಂದು ಅವರು ಆ ಕ್ರಮಕ್ಕೆ ಕಾರಣ ನೀಡಿದ್ದರು. ಆ ಜನಗಳು ಹಲವಾರು ವರ್ಷಗಳಿಂದ ತಮ್ಮದು ಎಂದು ಭಾವಿಸಿದ ಮನೆಗಳು ಕ್ಷಣಾರ್ಧದಲ್ಲಿ ಭೂಮಿಯ ಪಾಲಾದವು.

* ಸುರಕ್ಷತೆ ಮತ್ತು ಗೌಪ್ಯತೆಗಾಗಿ ಈ ಲೇಖನದಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳ ಹೆಸರುಗಳನ್ನು ಬದಲಿಸಲಾಗಿದೆ.



# ಕ್ಷಣದಲ್ಲಿಯೂ ಒಂದು ಬೀಡಿ ಸುತ್ತಲ್ಪಡುತ್ತದೆ

**(ಜಬೀನಾ ಖಾನಂ, ನೆರಳು ಬೀಡಿ ಕಾರ್ಮಿಕರ (ರಿ) ಯೂನಿಯನ್, ದಾವಣಗೆರೆ ಇವರ ಮಾಹಿತಿಯೊಂದಿಗೆ)**

ಅರ್ಧ ಕಿ.ಗ್ರಾಂ ತೆಂಡು ಎಲೆಗಳು ಒಂದೇ ರಾತ್ರಿಯಲ್ಲಿ 1000 ಬೀಡಿಗಳಾಗುತ್ತವೆ.
ರಾತ್ರಿ ಎಲ್ಲರೂ ಮಲಗಿದ ಮೇಲೆ ಅವಳು ತೆಂಡು ಎಲೆಗಳನ್ನು ನೀರಿನಲ್ಲಿ ನೆನೆ ಹಾಕುತ್ತಾಳೆ
ಬೆಳಗಿನ ಜಾವ 4 ಗಂಟೆಗೆ ಎದ್ದು, ನೀರು ತಂದು, ಮನೆ ಶುಚಿಮಾಡಿ, ಬೆಳಗಿನ ಉಪಹಾರ ತಯಾರಿಸಿ,
ಬೇರೆಬೇರೆ ಊಟದ ಡಬ್ಬಿ ಕಟ್ಟಿ, ಮಕ್ಕಳನ್ನು ಶಾಲೆಗೆ ಸಿದ್ಧಗೊಳಿಸಿ ಕಳಿಸುತ್ತಾಳೆ.

**ಅವಳ ಬದುಕಿನ ಪ್ರತಿಯೊಂದು ಉಳಿಕೆ ಕ್ಷಣದಲ್ಲಿಯೂ ಒಂದು ಬೀಡಿ ಸುತ್ತಲ್ಪಡುತ್ತದೆ**
ಈಗ ಬೆಳಗ್ಗೆ 9 ಗಂಟೆ. ಒಂದೊಂದೇ ತೆಂಡು ಎಲೆಗಳನ್ನು ನೀರು ಬಸಿಯುತ್ತಾಳೆ
ನಿಧಾನವಾಗಿ ಒಂದೊಂದೇ ಎಲೆಗೆ ತಂಬಾಕನ್ನು ಇಟ್ಟು ಎಲೆಯನ್ನು ಸುತ್ತುತ್ತಾಳೆ.
ನಂತರ ದಾರದಿಂದ ಅದನ್ನು ಬಿಗಿಯಾಗಿ ಕಟ್ಟಿ ಅದರ ಮೂತಿಯನ್ನು ಒಳಮುಖವಾಗಿ ತಳ್ಳುತ್ತಾಳೆ
600 ಬೀಡಿಗಳು ತಯಾರಾಗುತ್ತವೆ.

**ಅವಳ ಬದುಕಿನ ಪ್ರತಿಯೊಂದು ಉಳಿಕೆ ಕ್ಷಣದಲ್ಲಿಯೂ ಒಂದು ಬೀಡಿ ಸುತ್ತಲ್ಪಡುತ್ತದೆ**
ಈಗ ಸಂಜೆ 4 ಗಂಟೆ. ಮಕ್ಕಳು ಶಾಲೆಯಿಂದ ಮರಳಿದ್ದಾರೆ
ಅವಳ ಏಕಾಗ್ರತೆ ಭಂಗವಾಗುತ್ತದೆ, ಆದರೂ ಮುಂದುವರೆಸುತ್ತಾಳೆ.
ಒಂದು ನಿಮಿಷವೂ ವ್ಯರ್ಥವಾಗದಂತೆ ಸಾಧ್ಯವಾದಷ್ಟು ಬೀಡಿಯನ್ನು ಸುತ್ತುತ್ತಾಳೆ
ಅವಳ ದಿನದ ಗುರಿ 1150 ಬೀಡಿಗಳು. ಅವಳ ಕೈಗಳು ಮತ್ತು ಕಣ್ಣುಗಳು ಸತತವಾಗಿ ಕೆಲಸ ಮಾಡುತ್ತವೆ
ಒಂದು ದಿನದಲ್ಲಿ 1000 ಬೀಡಿಗಳನ್ನು ಸುತ್ತುತ್ತಾಳೆ.

**ಅವಳ ಬದುಕಿನ ಪ್ರತಿಯೊಂದು ಉಳಿಕೆ ಕ್ಷಣದಲ್ಲಿಯೂ ಒಂದು ಬೀಡಿ ಸುತ್ತಲ್ಪಡುತ್ತದೆ**
ಸೂರ್ಯ ಮುಳುಗುವ ಹೊತ್ತಿನಲ್ಲಿ ಅವಳು ಕಂಪನಿಯ ಮಾಲೀಕನನ್ನು ಭೇಟಿಯಾಗುತ್ತಾಳೆ
ಅವನು ಬೀಡಿಯ ಕಟ್ಟುಗಳನ್ನು ಪರೀಕ್ಷಿಸುತ್ತಾನೆ
ಅಂದಾಜು 200 ಬೀಡಿಗಳನ್ನು, ಸಡಿಲವಾಗಿ ಕಟ್ಟಿದೆ ಎಂದೋ, ಬಿಗಿಯಾಗಿ ಕಟ್ಟಿದೆ ಎಂದೋ, ತುಂಬಾ ಒಣಗಿದೆ ಎಂದೋ ಅಥವಾ ತುಂಬಾ ಹಸಿಯಾಗಿದೆ ಎಂದು ಕಾರಣ ನೀಡಿ ನಿರಾಕರಿಸುತ್ತಾನೆ
ಉಳಿದ 800-900 ಬೀಡಿಗಳಿಗೆ ಅವಳಿಗೆ ಸಿಗುವುದು ದಿನಕ್ಕೆ 120-130 ರೂಪಾಯಿಗಳು
ಬೀಡಿ ಕಾರ್ಮಿಕರ ದಿನದ ಕನಿಷ್ಠವೇತನ ದಿನಕ್ಕೆ 210 ರುಪಾಯಿಗಳು.

**ಅವಳ ಬದುಕಿನ ಪ್ರತಿಯೊಂದು ಉಳಿಕೆ ಕ್ಷಣದಲ್ಲಿಯೂ ಒಂದು ಬೀಡಿ ಸುತ್ತಲ್ಪಡುತ್ತದೆ**
ಬೀಡಿ ಸುತ್ತುವ ಕಾರ್ಮಿಕರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಾಗಿದ್ದಾರೆ
ಬಹುಸಂಖ್ಯೆಯ ಮಹಿಳೆಯರು ಮುಸ್ಲಿಂ ಮಹಿಳೆಯರಾಗಿದ್ದಾರೆ
ದಾವಣಗೆರೆಯೊಂದರಲ್ಲೇ 20,000-25,000 ಬೀಡಿ ಕಾರ್ಮಿಕರಿದ್ದಾರೆ.
ಬೀಡಿ ಉದ್ಯಮಕ್ಕೆ ಅತ್ಯಂತ ಕಡಿಮೆ ಕನಿಷ್ಠವೇತನ ಅಂದರೆ ದಿನಕ್ಕೆ ರೂ.210 ನಿಗದಿಯಾಗಿದೆ.
ಯಾವುದೇ ಸಾಮಾಜಿಕ ಭದ್ರತೆ, ಆರೋಗ್ಯ ಸೌಲಭ್ಯ, ರಜೆಗಳು, ಪಿಂಚಣಿ ಮತ್ತು ಭವಿಷ್ಯನಿಧಿ ಸೌಲಭ್ಯಗಳು ಇರುವುದಿಲ್ಲ.

**ಅವಳ ಬದುಕಿನ ಪ್ರತಿಯೊಂದು ಉಳಿಕೆ ಕ್ಷಣದಲ್ಲಿಯೂ ಒಂದು ಬೀಡಿ ಸುತ್ತಲ್ಪಡುತ್ತದೆ**
ಕಾರ್ಮಿಕ ಇಲಾಖೆಯಾಗಲೀ, ಸರ್ಕಾರವಾಗಲೀ ಅವಳನ್ನು ಪರಿಗಣಿಸುವುದಿಲ್ಲ. ಅವಳು ಅದೃಶ್ಯಳಾಗಿದ್ದಾಳೆ.
ಅವಳ ಮನೆಯೇ ಅವಳ ಕೆಲಸದ ಸ್ಥಳ. ಮನೆಯಿಂದ ಅವಳು ಹೊರಹೋಗುವುದಿಲ್ಲ. ಅವಳು ಯೂನಿಯನ್‌ಗೆ ಸೇರಿದ್ದಾಳೆ ಮತ್ತು ಯಾವುದೇ ದನಿಯೆತ್ತದೆ ಕೆಲಸ ಮಾಡುತ್ತಾಳೆ.

**ಅವಳ ಬದುಕಿನ ಪ್ರತಿಯೊಂದು ಉಳಿಕೆ ಕ್ಷಣದಲ್ಲಿಯೂ ಒಂದು ಬೀಡಿ ಸುತ್ತಲ್ಪಡುತ್ತದೆ**
ಅವಳು ವಾರಪೂರ್ತಿ ದುಡಿಯುತ್ತಾಳೆ
ಅವಳ ಗಂಡ ವಾರಕ್ಕೆ 3-4 ದಿನ ಮಾತ್ರ ದುಡಿಯುತ್ತಾನೆ.
ಅದೃಷ್ಟವಶಾತ್, ಆತನೇನಾದರೂ, ಕಟ್ಟಡ ಕಾರ್ಮಿಕ, ಕೃಷಿಕೂಲಿ ಕಾರ್ಮಿಕ ಅಥವಾ ತ್ಯಾಜ್ಯ ಸಂಸ್ಕರಣ ಕೆಲಸ ಮಾಡುತ್ತಿದ್ದರೆ ದಿನಕ್ಕೆ ರೂ. 300-400 ಸಂಪಾದಿಸುತ್ತಾರೆ.
ಅವಳ ದುಡಿಮೆಯು ಸ್ಥಿರವಾಗಿರುವುದರಿಂದ ಕುಟುಂಬವು ಅವಳ ದುಡಿಮೆಯನ್ನೇ ಅವಲಂಬಿಸಿದೆ.
ಅವಳು ತನ್ನ ಬದುಕಿನ ಒಂದು ಕ್ಷಣವನ್ನೂ ತನಗಾಗಿ ಉಳಿಸಿಕೊಳ್ಳಲಾಗುವುದಿಲ್ಲ.

**ಅವಳ ಬದುಕಿನ ಪ್ರತಿಯೊಂದು ಉಳಿಕೆ ಕ್ಷಣದಲ್ಲಿಯೂ ಒಂದು ಬೀಡಿ ಸುತ್ತಲ್ಪಡುತ್ತದೆ**
ಬೀಡಿಯನ್ನು ಸಂಗ್ರಹಿಸಿ ಪ್ಯಾಕ್ ಮಾಡುವುದು ಮಾಲೀಕರು.
25 ಬೀಡಿಗಳಿರುವ ಒಂದು ಕಟ್ಟು ರೂ. 20ಕ್ಕೆ ಮಾರಾಟವಾಗುತ್ತದೆ.
ಈ ಉದ್ಯಮವು ರಾಜ್ಯದ ಒಂದು ಮುಖ್ಯ ಉದ್ಯಮವಾಗಿದೆ
ಬೀಡಿಯನ್ನು ಸೇದುವುದು ಆರೋಗ್ಯಕ್ಕೆ ಹಾನಿಕರ ಎಂದು ಅವರು ಹೇಳುತ್ತಾರೆ.
ಕಠಿಣ ಕೆಲಸದ ನಡುವೆ ಬಿಡುವಿನ ವೇಳೆಯಲ್ಲಿ ಬೀಡಿ ಸೇದುವುದು ಅವಶ್ಯವಾಗಿದೆ.



## ಚಿನ್ಮಿಣಿ ಕ್ರಾಸ್

ಕಾರ್ಮಿಕರು ಭಯವಿಲ್ಲದೆ ಧ್ವನಿಯೆತ್ತಲು ಈ ಭಾಗವನ್ನು ಮೀಸಲಾಗಿಸಿದೆ. ಪಟ್ಟಣದಲ್ಲಿರುವ ಕಾರ್ಮಿಕರ ಆಸೆ-ಆಕಾಂಕ್ಷೆ ಮತ್ತು ಭಯಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ. ಪ್ರತಿಯೊಂದು ಗಲ್ಲಿಯಲ್ಲಿ, ನೆರೆಹೊರೆಯಲ್ಲಿ - ಚಿನ್ಮಿಣಿ ಕ್ರಾಸ್ ಎಲ್ಲಡೆ ಇದೆ. ಹಿಂಸೆ, ಪ್ರತಿರೋಧ ಮತ್ತು ಸೌಂದರ್ಯ ಒಟ್ಟಿಬಾಳುವ ಜಾಗವಿದು.

## ಮುಳ್ಳಿಲ್ಲದ ಗಡಿಯಾರ

ಈ ಭಾಗವನ್ನು ಪಟ್ಟಣದ ಕಾರ್ಮಿಕರ ದೈನಂದಿನ ಬದುಕು ಮತ್ತು ವೇಳಾಪಟ್ಟಿಗೆ ಮೀಸಲಾಗಿಸಿದೆ.

## ಜ್ಞಾಪನೆ

ವರ್ತಮಾನಕ್ಕೆ ಮಾಹಿತಿ ನೀಡುವ ಪ್ರತಿಭಟನೆಗಳಿಗಾಗಿ, ವ್ಯಕ್ತಿಗಳಿಗಾಗಿ, ಕಳೆದುಹೋದ ಕ್ಷಣಗಳಿಗಾಗಿ ಈ ವಿಭಾಗವನ್ನು ಮೀಸಲಾಗಿಸಿದೆ.

# ಪ್ರವೇಶ ನಿರ್ಬಂಧಿಸಲಾಗಿದೆ

## ಯಶಸ್ವಿ ಮನೆಕೆಲಸದವರೆನಿಸಿಕೊಳ್ಳಲು ಸೂಚನಾ ಕೈಪಿಡಿ

**ಪ್ರವೇಶ ನಿಷೇಧಿಸಲಾಗಿದೆ.**
**ಯಶಸ್ವಿ ಮನೆಕೆಲಸದವರೆನಿಸಿಕೊಳ್ಳಲು ಸೂಚನಾ ಕೈಪಿಡಿ**

ನೀವು ಯಾವ ಭಾಷೆ ಮಾತನಾಡುತ್ತೀರಿ?
ಕನ್ನಡ, ಹಿಂದಿ, ಬಂಗಾಳಿ, ತೆಲುಗು ಮತ್ತು ತಮಿಳು
ಈ ಏರಿಯಾಗೆ ನೀವು ಹೊಸಬರೇ?
ಹೌದು, ಮೊದಲ ಬಾರಿ ಇಲ್ಲಿಗೆ ಕೆಲಸಕ್ಕೆ ಬಂದಿದ್ದೇನೆ.
ಪರವಾಗಿಲ್ಲ, ನೀವು ಅವರ ಆಟದ ನಿಯಮಗಳನ್ನು ಕಲಿತರೆ ಸಾಕು ಅಷ್ಟೇ

ನೆನಪಿಡಿ, ನೀವು ಆ ಕಟ್ಟಡವನ್ನು ಪ್ರವೇಶಿಸಿದಾಗ, ಎಡಭಾಗದ ಲಿಫ್ಟ್ ಅನ್ನು ಮಾತ್ರವೇ ಬಳಸಬೇಕು. ಅದು ನಾಯಿಗಳಿಗೆ ಮತ್ತು ಕೆಲಸದವರಿಗೆಂದೇ ಇರುವುದು.

ನಗುಮೊಗದೊಂದಿಗೆ ಬಾಗಿಲ ಕರೆಗಂಟೆಯನ್ನು ಬಾರಿಸಿ, ಆದರೆ ತುಂಬ ಹೆಚ್ಚು ನಗಬೇಡಿ, ಅವರೆಲ್ಲ ನಿಮ್ಮನ್ನು ತುಂಬಾ ಸ್ನೇಹಮಯಿ ಎಂದುಕೊಳ್ಳುತ್ತಾರೆ
ನೇರವಾಗಿ ಅಡಿಗೆ ಮನೆಗೆ ಹೋಗಿ, ನೀನು ಮುಟ್ಟಾಗಿದ್ದೀಯಾ ಎಂದು ಅವಳು ಕೇಳಿದರೆ ಇಲ್ಲ ಎನ್ನಿ.
ಅಡುಗೆಮನೆಯ ಮೂಲೆಯಲ್ಲಿ ಪ್ರತ್ಯೇಕವಾಗಿ ಇಟ್ಟಿರುವ ತಟ್ಟೆ ಮತ್ತು ಲೋಟ ನಿಮಗೆ ಕಾಣಿಸುತ್ತದೆ
ಅವಳು ಏನಾದರೂ ಒಳ್ಳೆಯ ಮೂಡ್‌ನಲ್ಲಿ ಇದ್ದರೆ, ನಿಮಗೆ ಅಳಿದುಳಿದ ಟೀ ಸಿಗಬಹುದು.
ನೀವು ದನ ಮತ್ತು ಹಂದಿಯನ್ನು ತಿನ್ನುತ್ತೇವೆ ಎಂದು ಎಂದಿಗೂ ಅವರಿಗೆ ಹೇಳಬೇಡಿ.

ಹಜಾರವು ತಟಸ್ಥ ವಲಯ
ಅಲ್ಲಿ ನಿಧಾನವಾಗಿ ಕೆಲಸ ಮಾಡಿ, ಆಗ ಅವಳು ನೀವು ಕಷ್ಟಪಟ್ಟು ಕೆಲಸ ಮಾಡುತ್ತಿಲ್ಲ ಎಂದುಕೊಳ್ಳುವುದಿಲ್ಲ
ಒಡೆಯುವಂತಹ ಅಥವಾ ಅವರ ಬೆಲೆಬಾಳುವ ವಸ್ತುಗಳನ್ನು ಮುಟ್ಟಬೇಡಿ, ಅದರಿಂದ ನೀವು ಆತಂಕಗೊಳ್ಳುತ್ತೀರಿ,
ಅವೇನಾದರೂ ಬಿದ್ದು ಒಡೆದುಹೋದರೆ ಅದಕ್ಕೆ ನೀವೇ ಹಣ ಕೊಡಬೇಕಾಗುತ್ತದೆ.

ಮಲಗುವ ಮನೆಯು ಯುದ್ಧ ವಲಯ, ಅವಳು ಸುತ್ತ ಮುತ್ತ ಇದ್ದಾಗಲೇ ನೀವು ಅದನ್ನು ಶುಚಿಗೊಳಿಸಲು ಪ್ರಯತ್ನಿಸಿ.
ನಿಮ್ಮ ಪ್ರತಿಯೊಂದು ಚಲನವಲನವನ್ನೂ ಅವಳು ಗಮನಿಸಲು ಬಿಡಿ, ಇಲ್ಲದಿದ್ದರೆ ಏನಾದರೂ ಕಳ್ಳತನ ಮಾಡಿದಿರೆಂದು ಆರೋಪ ಹೊರಿಸುತ್ತಾಳೆ.

ಮಲಗುವ ಮನೆ ಅವನು ಏನಾದರೂ ಮಾಡಬಹುದಾದ ಸ್ಥಳವೂ ಹೌದು!
ಮೊದಲು ಒಂದಷ್ಟು ಮಾತುಕತೆಯೊಂದಿಗೆ ಶುರುವಾಗಿ, ನಿಮ್ಮ ಹಿಂದೆ ಮುಂದೆ ಸುತ್ತಾಡುತ್ತಾ ಯಾವ ಮಟ್ಟಕ್ಕೆ ಬೇಕಾದರೂ ಹೋಗಬಹುದು
ನೆನಪಿಡಿ, ನಿಮ್ಮ ಮಾತನ್ನು ಅಲ್ಲಿ ಯಾರೂ ನಂಬುವುದಿಲ್ಲ.
ಎಂದಿಗೂ, ಯಾವ ಕೋಣೆಯಲ್ಲೂ ಅವನೊಂದಿಗೆ ನೀವು ಒಬ್ಬರೇ ಇರದಂತೆ ನೋಡಿಕೊಳ್ಳಿ.
ಅಲಂಕರಿಸಿಕೊಳ್ಳಬೇಡಿ, ನಿಮ್ಮ ಸೀರೆಯನ್ನು ಬಿಗಿದು ಮೇಲೆತ್ತಿ ಕಟ್ಟಿ, ತುಂಬ ಸುಂದರವಾಗಿ ಕಾಣಬೇಡಿ.

ದೇವರ ಮನೆ
ಹಬ್ಬಗಳಲ್ಲಿ, ಏನಾದರೂ ವಿಶೇಷ ಅಡುಗೆ ಮಾಡಲು, ಅಥವಾ ಆಚರಣೆಗಳನ್ನು ಮಾಡಲು ಉತ್ಸಾಹ ತೋರಿಸಬೇಡಿ
ನೀವು ಆ ಕುಟುಂಬದಲ್ಲಿ ಒಬ್ಬರಾಗಲು ಪ್ರಯತ್ನಿಸುತ್ತಿದ್ದೀರೆಂದು ಅವಳು ನಿಮ್ಮನ್ನು ನಿಂದಿಸುತ್ತಾಳೆ
ನಮ್ಮನ್ನು ಅವರು ಅಪವಿತ್ರರು ಎಂದು ಪರಿಗಣಿಸಿರುವುದರಿಂದ ಅವರ ದೇವರ ಹತ್ತಿರ ನಮ್ಮನ್ನು ಬಿಟ್ಟುಕೊಳ್ಳುವುದಿಲ್ಲ.

ಮಕ್ಕಳ ಕೋಣೆ
ಅಕ್ಕರೆಯನ್ನು ತೋರಿಸಬೇಡಿ
ಅವರ ಮಕ್ಕಳೊಡನೆ ಆಡಬೇಡಿ, ಏಕೆಂದರೆ ನೀವು ಏನೋ ಮಾಡಹೊರಟಿದ್ದೀರೆಂದು ಅವರೆಲ್ಲ ಅನುಮಾನಿಸುತ್ತಾರೆ

ನಿಮ್ಮ ಕೆಲಸ ಮುಗಿದೊಡನೆ ಅಲ್ಲಿ ವಿಶ್ರಾಂತಿ ತೆಗೆದುಕೊಳ್ಳಬೇಡಿ,
ತಕ್ಷಣವೇ ಅಲ್ಲಿಂದ ಹೊರಡಿ.

ಆ ವಸತಿಸಂಕೀರ್ಣದಲ್ಲಿರುವ ಪಾರ್ಕ್‌ಗೆ ಹೋಗಿ, ಆದರೆ ಅಲ್ಲಿರುವ ಬೆಂಚ್‌ಗಳ ಮೇಲೆ ಕೂರಬೇಡಿ, ಏಕೆಂದರೆ, ಕಾವಲುಗಾರರು ನಿಮ್ಮನ್ನು ಅಟ್ಟಿಸಿಕೊಂಡು ಬರುತ್ತಾರೆ.

ಆ ಕಟ್ಟಡದಲ್ಲಿರುವ ಸಾಮಾನ್ಯ ಶೌಚಾಲಯದ ಪಕ್ಕದಲ್ಲಿ ಬೆಂಚ್‌ಗಳನ್ನು ಹಾಕಿದ್ದಾರೆ, ಅಲ್ಲಿ ನೀವು ಕುಳಿತುಕೊಳ್ಳಬಹುದು.

ನೆನಪಿಡಿ, ನಿಮ್ಮದೇ ಮನೆ ಎಂದು ಭಾವಿಸಿ ಶುಚಿಗೊಳಿಸಿ. ಅವರ ಮಕ್ಕಳನ್ನು ನಿಮ್ಮದೇ ಮಕ್ಕಳು ಎಂದು ಭಾವಿಸಿ ನೋಡಿಕೊಳ್ಳಿ, ನಿಮ್ಮ ಮನೆಯ ಅಡುಗೆ ಮಾಡಿಕೊಳ್ಳುತ್ತಿದ್ದೇನೆ ಎಂದು ಭಾವಿಸಿ ಅಡುಗೆ ಮಾಡಿ. ಭಾವಿಸಿ ಅಷ್ಟೇ, ಆದರೆ ಅವಾವುದೂ ಒಂದು ಬಾರಿಯಾದರೂ ನಿಮ್ಮದು ಎಂದು ನಿಜವಾಗಿ ನಂಬಿಕೊಳ್ಳಬೇಡಿ!

# ಗಟ್ಟಿಯಾಗಿ, ಸ್ಪಷ್ಟವಾಗಿ

ಬೀದಿಗೆ ಬಂದೇವು, ಬೀದಿಗೆ ಬದುಕನ್ನು ಕಟ್ಟಿ ತಂದೆವು
ನೂರಾರು ಆಸೆಯ ಮೂಟೆಯ ಹೊತ್ತು ತಂದೆವು
ಪೋಲೀಸು ಗೂಂಡಾಗಳ ದೌರ್ಜನ್ಯ ತಡೆದೇವು
ನಾವುಗಳು ಮಹಿಳೆಯರು, ನಮ್ಮ ಹಕ್ಕನ್ನು ಪಡೆದೇವು
ಹಲವಾರು ಮಹಿಳಾ ಸಂಘಗಳಿದ್ದರೂ, ಸಮುದಾಯದ
ಬೀದಿಯ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯವನ್ನು ಎದುರಿಸಲು ದಿಟ್ಟತನದಿಂದ ನಿಂತ
ಅದೊಂದೇ ಸಂಘ ಸಾಧನ ಮಹಿಳಾ ಸಂಘ.
- ಮಂಗಳಾ ಆರ್. , ಸಾಧನ ಮಹಿಳಾ ಸಂಘ

ಬೆಂಗಳೂರಿನಲ್ಲಿರುವ ಸಾಧನ ಮಹಿಳಾ ಸಂಘವು, ಕಳೆದ 17 ವರ್ಷಗಳಿಂದ ಬೀದಿಯನ್ನು ಆಧರಿಸಿ ಲೈಂಗಿಕ ವೃತ್ತಿಯಲ್ಲಿ ತೊಡಗಿರುವ ಮಹಿಳೆಯರ ಹಕ್ಕುಗಳಿಗಾಗಿ ಕೆಲಸ ಮಾಡುತ್ತಿದೆ.

# ಶ್ರದ್ಧಾಂಜಲಿ

## ಮೃತಪಟ್ಟವರ ಸುದ್ದಿ

# ಸತ್ತವರು ಸಾಯುವುದಿಲ್ಲ

ಅವಳು ನಿಮ್ಮ ಕಸವನ್ನು ಸುಡುತ್ತಿದ್ದಳು, ಅವಳ ಸೀರೆಗೆ ಬೆಂಕಿ ಹೊತ್ತಿ ಸತ್ತಳು
ಅವನು ನಿಮ್ಮ ಮಲದಗುಂಡಿಯನ್ನು ಸ್ವಚ್ಛಗೊಳಿಸುತ್ತಿದ್ದ, ಅವನು ಪೈಪ್ ಸಿಡಿದು ಸತ್ತನು.
ಅವಳ ಕೂಲಿ ಅವಳಿಗೆ ಸಿಗಲಿಲ್ಲ, ಅವಳು ನೇಣುಹಾಕಿಕೊಂಡು ಸತ್ತಳು.
ಅವನು ಒಳಚರಂಡಿಯನ್ನು ಸ್ವಚ್ಛಗೊಳಿಸುತ್ತಿದ್ದ, ವಿಷಾನಿಲವನ್ನು ಉಸಿರಾಡಿ ಸತ್ತನು

**ನೆನಪಿಡಿ,**
**ಸತ್ತವರು ಸಾಯುವುದಿಲ್ಲ.**

ಮಾಧ್ಯಮಗಳು ಕಿವುಡಾದಾಗ,
ಸರ್ಕಾರವು ಹೊಣೆಗೇಡಿಯಾದಾಗ,
ಅವನ ಮೃತದೇಹವನ್ನು ಮನೆಗೆ ಕೊಂಡೊಯ್ಯಲು ಹಣವಿಲ್ಲದಾಗ,
ಸಾರ್ವಜನಿಕರು ನಿರ್ಲಕ್ಷ್ಯ ತೋರಿದಾಗ,
ಅವನ ಕುಟುಂಬದ ಸದಸ್ಯರಿಗೆ ಯಾವುದೇ ಕೆಲಸ ಕೊಡದಿದ್ದಾಗ
ಮತ್ತು ಈ ನಗರವು ವಿಸ್ಮೃತಿಗೆ ಒಳಗಾದಾಗ,

**ನೆನಪಿಡಿ,**
**ಸತ್ತವರು ಸಾಯುವುದಿಲ್ಲ.**

ನಿಮ್ಮ ಹೊಸ ಮನೆ ಕಟ್ಟುತ್ತೀರಿ,
ನಿರ್ಲಕ್ಷ್ಯದಿಂದ ತ್ಯಾಜ್ಯವನ್ನು ಸುರಿಯುತ್ತೀರಿ,
ಕುರುಡುತನವನ್ನೇ ಆಯ್ಕೆಮಾಡಿಕೊಳ್ಳುತ್ತೀರಿ,
ಮತ್ತು ನಿಮ್ಮ ಅಭಿವೃದ್ಧಿಯನ್ನೇ ಬೋಧಿಸುತ್ತೀರಿ,

**ನೆನಪಿಡಿ,**
**ಸತ್ತವರು ಸಾಯುವುದಿಲ್ಲ.**

ಮತ್ತು ನೀವು ನಿಮ್ಮ ಗೋಡೆಗಳನ್ನು ಕಟ್ಟುವಾಗ,
ನಿಮ್ಮ ಗೇಟ್‌ಗಳಿಗೆ ಬೀಗ ಹಾಕಿಕೊಳ್ಳುವಾಗ,
ಹೊಲಸು ಶುಚಿಗೊಂಡದ್ದನ್ನು ನೋಡಿ
ಸರ್ಕಾರವನ್ನು ಹೊಗಳುತ್ತೀರಿ

**ನೆನಪಿಡಿ,**
**ಸತ್ತವರು ಸಾಯುವುದಿಲ್ಲ.**

* ಎಲ್ಲಿಯೂ ದಾಖಲಾಗದೆ, ವರದಿಯಾಗದೆ ಉಳಿದ, ಬೆಂಗಳೂರು ನಗರದಲ್ಲಿನ ಕಸ ಆಯುವವರ, ಕಸ ಗುಡಿಸುವವರ, ಮತ್ತು ಸಫಾಯಿ ಕರ್ಮಚಾರಿಗಳ ಸಾವುಗಳಿಗೆ ಈ ಶ್ರದ್ಧಾಂಜಲಿ ಅರ್ಪಣೆ. ರಾಜ್ಯದಲ್ಲಿ ಸಂಭವಿಸುವ ಸಫಾಯಿ ಕರ್ಮಚಾರಿಗಳ ಸಾವುಗಳ ಒಟ್ಟು ಸಂಖ್ಯೆಯಲ್ಲಿ, ಅರ್ಧದಷ್ಟು ಸಂಖ್ಯೆಗೆ ಈ ನಗರ ಸಾಕ್ಷಿಯಾಗಿದೆ. ಕೆಲಸದ ಸ್ಥಳದ ಅಪಾಯಗಳು ಈ ಸಾವುಗಳಿಗೆ ಸಾಮಾನ್ಯ ಕಾರಣ. ಇತ್ತೀಚೆಗೆ, ತಮಗೆ ತಮ್ಮ ಕೆಲಸದ ಕೂಲಿ ದೊರಕದೇ ಇದ್ದುದಕ್ಕೆ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರ್ಕಾರದಿಂದಾಗಲೀ, ಮಾಧ್ಯಮಗಳಿಂದಾಗಲೀ ಅಥವಾ ಸಾರ್ವಜನಿಕರಿಂದಾಗಲೀ ಅವರ ಸಾವುಗಳು ದಾಖಲಾಗುವುದಿಲ್ಲ, ಅದನ್ನು ಗುರುತಿಸಲಾಗುವುದಿಲ್ಲ,

